








**ಸನ್ಯಾಸಿ:** ಏನು ಬೇಕು ಮಗು?

**ಗುಂಡ:** ನನ್ನ ಹೆಂಡತಿ ನನ್ನ ಮಾತು ಕೇಳುವ ಹಾಗೆ ಮಾಡಿ ಗುರುಗಳೇ.

**ಸನ್ಯಾಸಿ:** ಅಯ್ಯೋ ಮೂಢ, ನನ್ನ ಹೆಂಡತಿ ನನ್ನ ಮಾತು ಒಮ್ಮೆಯೂ ಕೇಳಲಾರದ್ದಕ್ಕೆ ತಾನೇ ನಾನು ಸನ್ಯಾಸಿಯಾಗಿದ್ದು.

***

**ಹೆಂಡತಿ:** ರೀ! ಈ ವಾರ ಪೂರ್ತಿ ಸಿನಿಮಾಕ್ಕೋಗೋಣಾ, ಮುಂದಿನ ವಾರ ಫುಲ್ ಶಾಪಿಂಗ್‌ಗೆ ಹೋಗೋಣ.

**ಗಂಡ:** ಅದರ ಮುಂದಿನ ವಾರ ದೇವಸ್ಥಾನಕ್ಕೆ ಹೋಗೋಣ.

**ಹೆಂಡತಿ:** ಯಾಕ್ರಿ?

**ಗಂಡ:** ಭಿಕ್ಷೆ ಎತ್ತೋಕೆ.

***

**ಮಗ:** ಅಪ್ಪ ನಿಮಗೆ ಅಮ್ಮನ ಮೇಲೆ ಎಷ್ಟೊಂದು ಪ್ರೀತಿ, ದಿನ ಹೂ ತರ್ತೀರಾ.

**ಅಪ್ಪ:** ಲೋ ದಡ್ಡ ಇದು ಅಮ್ಮನ ಮೇಲಿನ ಪ್ರೀತಿ ಅಲ್ಲೋ, ಹೂ ಮಾರುವವಳ ಮೇಲಿನ ಪ್ರೀತಿ.

***

**ಡಾಕ್ಟರ್:** ಏನು ಕೆಲಸ ಮಾಡ್ತೀರಿ, ಜ್ವರ ಯಾವಾಗಿನಿಂದ ಇದೆ?

**ರೋಗಿ:** ನಾನು ಸ್ಟಾಕ್ ಬ್ರೋಕರ್. ಜ್ವರ ನಿನ್ನೆಯಿಂದ ಇದೆ ಡಾಕ್ಟ್ರೆ.

**ಡಾಕ್ಟರ್:** ಅರೆರೆ! ಟೆಂಪರೇಚರ್ ನೂರಾ ನಾಲ್ಕಕ್ಕೆ ಏರಿದೆಯಲ್ಲ.

**ರೋಗಿ:** ಹೌದಾ ವೆರಿಗುಡ್ ನೂರಾ ಐದಾದರೆ ಇವತ್ತೇ ಮಾರಿಬಿಡಿ ಡಾಕ್ಟ್ರೆ.

***

**ರಾಜಕಾರಣಿ:** ಡಾಕ್ಟರ್, ನನಗೆ ನಿದ್ದೆ ಸರಿಯಾಗಿ ಬರುತ್ತಿಲ್ಲ. ಏನ್ ಮಾಡ್ಲಿ?

**ಡಾಕ್ಟರ್:** ಚಿಂತೆ ಬಿಟ್ಟು ಮಲಗಿ.

**ರಾಜಕಾರಣಿ:** ಅದೇ ತೊಂದ್ರೆ, ಚಿಂತೆ ಮಾಡಿದ್ರೇನೇ ನನಗೆ ಸರಿಯಾಗಿ ನಿದ್ರೆ ಬರುತ್ತೆ. ಇಲ್ಲಾಂದ್ರೆ ಯಾರಾದ್ರೂ ನನ್ನ ಕುರ್ಚಿ ಕಿತ್ಕೊತಾರೇನೋ ಅಂತ ಭಯ ಆಗುತ್ತೆ.







***

**ತಿಮ್ಮ:** ನನಗೆ ವಾಟ್ಸ್‌ಆ್ಯಪ್‌ನಿಂದ ಬೋರ್ ಆಯ್ತು.

**ಗುಂಡ:** ವಾಟ್ಸ್‌ಆ್ಯಪ್ ಅನ್‌ಇನ್‌ಸ್ಟಾಲ್ ಮಾಡು ಹಾಗಾದರೆ.

**ತಿಮ್ಮ:** ಅಯ್ಯೋ! ಹಾಗಾದ್ರೆ ನಾನು ಹೇಗೆ ಎಲ್ಲರಿಗೂ ಹೇಳೋದು ನನಗೆ ವಾಟ್ಸ್‌ಆ್ಯಪ್ ಬೋರ್ ಆಗಿದೆ ಅಂತಾ?

***

**ಗುಂಡ:** ಡಾಕ್ಟ್ರೆ ನಂಗೆ ಬರೀ ಧ್ವನಿ ಮಾತ್ರ ಕೇಳಿಸುತ್ತೆ, ಮನುಷ್ಯರು ಮಾತ್ರ ಕಾಣಿಸಲ್ಲ.

**ಡಾಕ್ಟರ್:** ಈ ರೀತಿ ಯಾವಾಗ ಆಗುತ್ತೆ?

**ಗುಂಡ:** ಫೋನ್‌ನಲ್ಲಿ ಮಾತಾಡುವಾಗ ಡಾಕ್ಟ್ರೆ.

ಸಂಗ್ರಹ: **ಶರದ ಕುಲಕರ್ಣಿ, ಬೀದರ್**